## ಚೇಳಿನ ಬಾಲದ ಜೇಡ

ಈಚೆಗೆ ಬೇಲಿಯ ಗಿಡವೊಂದರಲ್ಲಿದ್ದ ಜೇಡರ ಬಲೆಯಲ್ಲಿ ಒಣ ಹೂವಿನಂತೆ ವಿಚಿತ್ರವಾಗಿ ಏನೋ ಕಂಡಿತು. ಕುತೂಹಲದಿಂದ ಹತ್ತಿರ ಹೋಗಿ ಅದನ್ನು ಮುಟ್ಟಲು ಮುಂದಾದೆ. ಅದು ಮಿಸುಕಾಡಿತು. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಅದು ಅಪರೂಪದ ಚೇಳಿನ ಬಾಲದ ಜೇಡ ಎಂದು ತಿಳಿದು ಕ್ಯಾಮೆರಾದಲ್ಲಿ ಸೆರೆಹಿಡಿದೆ. ಇದು ಕಂಡಿದ್ದು, ಬೆಂಗಳೂರಿನ ಉತ್ತರಹಳ್ಳಿಯ ಮುಳ್ಳು ಬಸವಣ್ಣನ ದೇವಸ್ಥಾನದ ಮುಂದಿನ ಬೇಲಿಯಲ್ಲಿ.

–ಕೋಟೆ ಪ್ರಕಾಶ ತಂತ್ರಿ, ಬೆಂಗಳೂರು






## ಹಟಯೋಗಿ ಫಕೀರಪ್ಪ ನಾಯ್ಕರ್

ಪಶುಪತಿಹಾಳದ ಉನ್ಮನಿಯೋಗಿ ಫಕೀರಪ್ಪ ನಾಯ್ಕರ್ ಅವರು ಸಿದ್ಧಾರೂಢ ಸ್ವಾಮಿಗಳಿಂದ ಯೋಗ ಸಿದ್ಧಿ ಪಡೆದವರು. ಆರೂಢರ ಆಜ್ಞೆಯನ್ನು ಮೀರದೆ 33 ವರ್ಷಗಳ ಕಾಲ ಯೋಗ ಮಾರ್ಗವನ್ನೇ ನಂಬಿದವರು. ಅವರ ಶಿಲ್ಪಕಲಾಕೃತಿಯನ್ನು ಬೆಂಗಳೂರಿನ 'ಮಹಾಯೋಗ ಕ್ಷೇತ್ರ'ದಲ್ಲಿ ಸ್ಥಾಪಿಸಲಾಗಿದೆ. ಅವರ ಪುತ್ರ ಡಾ. ಹೊನ್ನಪ್ಪ ಫಕೀರಪ್ಪ ನಾಯ್ಕರ್ ಅವರಿಂದ ಕನ್ನಡದ ವರನಟ ಡಾ. ರಾಜ್‌ಕುಮಾರ್ ಈ ಯೋಗಕ್ಷೇತ್ರದಲ್ಲಿ ಯೋಗ ಕಲಿತಿದ್ದಾರೆ.

ಫಕೀರಪ್ಪ ನಾಯ್ಕರ್ ಅವರ ಪುತ್ರ ಹೊನ್ನಪ್ಪ ಫಕೀರಪ್ಪ ನಾಯ್ಕರ್ ಅವರೂ ಯೋಗದ ಮಹತ್ವ, ಶಕ್ತಿಯನ್ನು ಪ್ರಪಂಚಕ್ಕೆ ಸಾರಿದವರಲ್ಲಿ ಪ್ರಮುಖರು. ದೇಶದ ಉದ್ದಗಲಕ್ಕೂ ಹಾಗೂ ವಿದೇಶಗಳಲ್ಲೂ ಅವರು ಹಟಯೋಗದ ಬಗ್ಗೆ ಅನೇಕ ಮಹತ್ವದ ವಿಚಾರಗಳನ್ನು ತಿಳಿಸಿದರು.

–ನಾಗರಾಜನಾಯಕ ಡಿ. ಡೊಳ್ಳಿನ, ಕೊಪ್ಪಳ

## ಸಾಂಪ್ರದಾಯಿಕ ಕಲೆ 'ಬಾಗಿಲ ಬಳ್ಳಿ'

ಹಳ್ಳಿ ಮನೆಗಳ ಸೊಬಗು ಎದ್ದು ಕಾಣುವುದೇ ಅಲ್ಲಿನ ಮರದ ಕೆತ್ತನೆ ಮತ್ತು ಸಾಂಪ್ರದಾಯಿಕ ಚಿತ್ತಾರಗಳಿಂದ ಎನ್ನಬಹುದು. ಹೊಸಹೊಸ ತಂತ್ರಜ್ಞಾನದ, ಆಧುನಿಕ ವಾಸ್ತುನಕ್ಷೆಗಳ ಭವ್ಯ ಕಾಂಕ್ರೀಟ್ ಕಟ್ಟಡಗಳ ಎದುರಲ್ಲೂ ನಮ್ಮ ಹಳ್ಳಿಯ ಅಂದಿನ ಮನೆಗಳು ಅವುಗಳ ವಿಶಿಷ್ಟ ಚೆಲುವಿನಿಂದಲೇ ಗಮನಸೆಳೆಯುತ್ತವೆ. ಹಳ್ಳಿ ಮನೆಗಳಿಗೆ ಅವುಗಳದ್ದೇ ಆದ ವಿಶಿಷ್ಟ ಒಳಾಂಗಣ ಮತ್ತು ಹೊರಾಂಗಣ ಅಲಂಕಾರಗಳು ಶೋಭೆ ತರುತ್ತವೆ. ಅವುಗಳಲ್ಲಿ 'ಬಾಗಿಲ ತೋರಣ' ಕಲೆಯೂ ಒಂದು.

ಬಾಗಿಲ ಬಳ್ಳಿ ಕಲೆಯನ್ನು ಪರಿಣಿತ ಕಲಾವಿದರಿಂದ ತೈಲವರ್ಣ ಮಾಧ್ಯಮದಲ್ಲಿ ಬರೆಸಲಾಗುತ್ತದೆ. ಬೇರೆ ಬೇರೆ ವಿನ್ಯಾಸಗಳಲ್ಲಿ ಹೂಬಳ್ಳಿ, ಹೂಕುಂಡಗಳನ್ನು ಅಲಂಕಾರಿಕ ಶೈಲಿಗಳಲ್ಲಿ ಕಲಾವಿದರು ಬಾಗಿಲಿನ ಚೌಕಟ್ಟಿನ ಸುತ್ತ ಚಿತ್ರಿಸುತ್ತಾರೆ. ಇಪ್ಪತ್ತು–ಮೂವತ್ತು ವರ್ಷಗಳ ಕಾಲ ಬಾಳಿಕೆ ಬರುವ ಇಂತಹ ತೈಲವರ್ಣದ ಅಲಂಕಾರಗಳು ಮನೆಯೊಳಗಿನ ಸೌಂದರ್ಯವನ್ನು ಹೆಚ್ಚಿಸುತ್ತವೆ. ಅವು ಮನೆಯನ್ನು ಅಲಂಕರಿಸುತ್ತ, ಮನೆಯ ಸದಸ್ಯರ ಸೌಂದರ್ಯ ಪ್ರಜ್ಞೆಯ ಪ್ರತೀಕವೂ ಆಗಿ ಉಳಿಯುತ್ತವೆ. ಹೊಸಮನೆಯ ಗೃಹ ಪ್ರವೇಶದ ಸಂದರ್ಭಕ್ಕೆ, ಮನೆಯಲ್ಲಿ ಜರುಗುವ ಶುಭ ಕಾರ್ಯದ ಸಮಯದಲ್ಲಿ ವಾಸ್ತು ಬಾಗಿಲು, ದೇವರ ಕೋಣೆ ಮೊದಲಾದ ನಿರ್ದಿಷ್ಟ ಜಾಗಗಳಲ್ಲಿ ಬಾಗಿಲ ಬಳ್ಳಿ ಕಲೆಗಳಿಂದ ಹೊಸದಾಗಿ ಅಲಂಕರಿಸುವುದು ರೂಢಿ. ಹಾಗಾಗಿ ಹಿಂದೆ ಬಾಗಿಲು ತೋರಣ ಬರೆಯುವ ಪರಿಣಿತ ಕಲಾವಿದರು ಪ್ರತಿ ಊರುಕೇರಿಗಳಲ್ಲೂ ಸಿಗುತ್ತಿದ್ದರು. ಆದರೆ, ಇಂದು ಬದಲಾದ ಕಾಲಕ್ಕೆ ಹೂಬಳ್ಳಿ ಚಿತ್ರಿಸುವ ಕಲಾವಿದರು ಬೆರಳೆಣಿಕೆಯಷ್ಟು ಮಾತ್ರವೇ ಇದ್ದು, ಈ ವಿಶಿಷ್ಟ ಕಲೆಯೂ ಅವಸಾನದ ಅಂಚು ತಲುಪಿದೆ ಎನ್ನಬಹುದು.

–ಜಿ.ಎಂ. ಬೊಮ್ನಳ್ಳಿ, ಶಿರಸಿ

